**ಅಸಲು ದಾವಾ ಸಂಖ್ಯೆ- 47/2022** **ಪಿ.ಡಬ್ಲ್ಯೂ:- 2**

ದಿನಾಂಕಃ **10-09-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-**

ಸಾಮಾನ್ಯವಾಗಿ ಸರ್ಕಾರದಿಂದ ಯಾವುದೇ ಒಬ್ಬ ವ್ಯಕ್ತಿಗೆ ಜಮೀನು ಮಂಜೂರಾದರೆ ಅಂತಹ ಜಮೀನು ಕೆಲವು ವರ್ಷಗಳ ಕಾಲ ಬೇರೊಬ್ಬರಿಗೆ ಮಾರಾಟ ಮಾಡುವುದರ ಬಗ್ಗೆ ಷರತ್ತು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ಕಾರದವರು ಜಮೀನನ್ನು ಮಾರಾಟ ಮಾಡಲು ಷರತ್ತು ವಿಧಿಸಿದ ಪಕ್ಷದಲ್ಲಿ ಅಂತಹ ಜಮೀನನ್ನು ಮಾರಾಟ ಮಾಡಬೇಕಾದರೆ ಸಂಬಂಧಪಟ್ಟ ಅಧಿಕಾರಿಗಳಿಂದ ಅನುಮತಿಯನ್ನು ಪಡೆದುಕೊಂಡು ಮಾರಾಟ ಮಾಡಬೇಕು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಕಂಡ ವಿಚಾರ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಸೊರಟೂರು ಗ್ರಾಮದ ಮುಖ್ಯ ರಸ್ತೆಯಲ್ಲಿ ಇದೆ ಎಂದರೆ ಸರಿಯಲ್ಲ. ನಿಪಿ-2 ದಾಖಲೆಯಲ್ಲಿ ಟಿ ರಾಮಪ್ಪ ಎಂಬ ಹೆಸರನ್ನು ಗೆರೆ ಎಳೆದಿದ್ದು ಆದರೆ ಅದನ್ನು ಯಾರು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಸೊರಟೂರು ಗ್ರಾಮಕ್ಕೆ ಹೊಂದಿಕೊಂಡು ಇರುವುದರಿಂದ ಸಾಕಷ್ಟು ಬೆಲೆ ಬಾಳುತ್ತಿರುವುದರಿಂದ ಅದನ್ನು ಕಬಳಿಸುವ ಉದ್ದೇಶದಿಂದ ನಿಪಿ-2 ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ನಮೂದಾಗಿರುವ ಒಕ್ಕಣೆಯನ್ನು ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-2 ರಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತು. ನಿಪಿ-2 ರಲ್ಲಿ ರಾಮಪ್ಪರವರು ಮಂಜುಳಾರವರ ಅಜ್ಜಿಗೆ ಬರೆದುಕೊಟ್ಟಿರುವುದನ್ನು ಹೊರತುಪಡಿಸಿ ಬೇರೆ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. 100 ರೂ ನ ಮುಖ ಬೆಲೆಯ ಹಣವನ್ನು ಕೊಟ್ಟಿರುತ್ತೇನೆ. 100 ರೂ ಮುಖ ಬೆಲೆಯ ನೋಟುಗಳನ್ನು ಹೊರತುಪಡಿಸಿ

ಯಾವುದೇ ಮುಖ ಬೆಲೆಯ ನೋಟುಗಳನ್ನು ಕೊಟ್ಟಿರುವುದಿಲ್ಲ. ವಾದಿಯ ಅಜ್ಜಿ ಕಾಮವ್ವ ತನ್ನ ಜೀವಿತಾವಧಿಯಲ್ಲಿ ರಾಮಪ್ಪರವರಿಗಾಗಲೀ ಅಥವಾ ಅವರ ವಾರಸುದಾರರಿಗಾಗಲೀ ಬಾಕಿ ಹಣವನ್ನು ಪಡೆದುಕೊಂಡು ಕ್ರಯ ಪತ್ರವನ್ನು ಬರೆದುಕೊಡುವಂತೆ ನೋಟೀಸ್ ಕೊಟ್ಟಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ವಾದಿಯ ಅಜ್ಜಿ ಕಾಮವ್ವ ಯಾವಾಗ ತೀರಿಕೊಂಡಿದ್ದಾರೆ ಎಂದು ನನಗೆ ನಿರ್ದಿಷ್ಟವಾದ ದಿನಾಂಕ ನೆನಪಿಲ್ಲ. ಕಾಮವ್ವರವರು ಎಷ್ಟು ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಕಾಮವ್ವರವರು ಈಗ್ಗೆ 30-40 ವರ್ಷಗ ಹಿಂದೆ ತೀರಿಕೊಂಡಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.